ಇ) ಆಡಳಿತಾತ್ಮಕ ಮಂಜೂರಾತಿ ಮತ್ತು ಇದಕ್ಕಾಗಿ ಸ್ಥಳವನ್ನು ಸಹ ಗುರುತಿಸಿದ್ದರೂ ಕೇಂದ್ರ ಸ್ಥಾಪನೆಯ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸದಿರಲು ಕಾರಣಗಳೇನು ,

ಈ) ಕೆಲಸ ಪ್ರಾರಂಭಿಸಿ, ಪೂರ್ಣಗೊಳಿಸಲು ಬೇಕಾಗುವ ಸಮಯ ಎಷ್ಟು , ವಿವರ ನೀಡುವುದು ?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಪ್ರಸ್ತುತ ಒಂದು ಸ್ನಾತಕೋತ್ತರ ಕೇಂದ್ರವಿದ್ದು, ಅದು ವಿಶ್ವವಿದ್ಯಾನಿಲಯ ಘಟಕ ಕಾಲೇಜಾದ ಎಫ್ ಎಂ ಕೆ ಎಂ ಸಿ ಕಾಲೇಜು, ಮಡಿಕೇರಿ ಇದರ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ

ಆ) ಇ) ಮತ್ತು ಈ) ಮಂಗಳೂರು ವಿಶ್ವವಿದ್ಯಾನಿಲಯವು ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನಲ್ಲಿ ಒಂದು ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಿತು ಆದರೆ, ಈ ಕೇಂದ್ರದ ಸ್ಥಾಪನೆಗೆ ತಗಲುವ ಖರ್ಚು– ವೆಚ್ಚಗಳನ್ನು ಯಾವ ಮೂಲದಿಂದ ಭರಿಸಬೇಕು ಎಂಬ ಬಗ್ಗೆ ನಿರ್ದಿಷ್ಟ ನಿಲುವನ್ನು ಮಂಗಳೂರು ವಿಶ್ವವಿದ್ಯಾಲಯವು ತೆಗೆದುಕೊಳ್ಳದಿರುವ ಕಾರಣ ಈ ಬಗ್ಗೆ ಯಾವುದೇ ಅಂತಿಮ ನಿರ್ಧಾರ ತೆಗೆದುಕೊಂಡಿರುವುದಿಲ್ಲ ಆದಾಗ್ಯೂ ಈ ಕೇಂದ್ರದ ಸ್ಥಾಪನೆಗೆ ತಗಲುವ ಖರ್ಚು–ವೆಚ್ಚಗಳನ್ನು ಯಾವ ಮೂಲದಿಂದ ಭರಿಸಬೇಕು ಎಂಬ ಬಗ್ಗೆ ವರದಿಯನ್ನು ವಿಶ್ವವಿದ್ಯಾಲಯದಿಂದ ನಿರೀಕ್ಷಿಸಲಾಗಿದ್ದು, ವರದಿ ಸ್ವೀಕರಿಸಿದ ನಂತರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು

104 (437) ಶ್ರೀ ಚನ್ನಬಸರಾಜ್ (ಅಪ್ಪಾಜಿ)

ಶ್ರೀ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆಯಲ್ಲಿ ಹಲವಾರು ನ್ಯೂನತೆಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪಡಿತರ ಚೀಟಿಯನ್ನು ಸಮರ್ಪಕವಾಗಿ ಹಾಗೂ ಅರ್ಹರಿಗೆ ಹಂಚಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹೌದು

ಆ) 1) ವರಮಾನ ನಿಗದಿಪಡಿಸಿಲು ಅನುಕೂಲವಾಗುವಂತೆ ಮಾನದಂಡಗಳನ್ನು ನಿಗಧಿಪಡಿಸಿದೆ

2) ವಿಧನ ಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು / ಜಿಲ್ಲಾ ಪರಿಷತ್ ಸದಸ್ಯರು / ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ / ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಅಭಿಶಿಕ್ಷಣ (Orientation Programme) ತರಬೇತಿ ನೀಡಲಾಗಿದೆ

3) ಮನೆ ಮನೆ ಸಮೀಕ್ಷೆಯನ್ನು ಮನೆ ಸಂಖ್ಯೆ ನೀಡಿ ಪ್ರತಿಯೊಂದು ಕುಟುಂಬವನ್ನು ಗುರುತಿಸಿದೆ

4) ಸಮೀಕ್ಷೆಯನ್ನು ಮಾಡಲು ತಂಡಗಳನ್ನು ರಚಿಸಲಾಗಿದೆ ಹಾಗೂ ಇವರಿಗೆ ತರಬೇತಿ ನೀಡಿದೆ

5) ತಂಡದ ಶಿಫಾರಸುಗಳ ಪಟ್ಟಿಯನ್ನು ಗ್ರಾಮ ಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ ಸಭೆಗಳಲ್ಲಿ ಅನುಮೋದನೆ ಪಡೆದಿದೆ

, 6) ತಾತ್ಕಾಲಿಕ ಪಡಿತರ ಚೀಟಿ ಮುದ್ರಿಸಿ ಮನೆ ಮನೆಗೆ ಹೋಗಿ ಹಂಚಿಕೆ ಮಾಡಿದೆ

7) ಲೋಪಗಳನ್ನು ಸರಿಪಡಿಸಲು ಅವಕಾಶ ನೀಡಿದೆ

8) ನಂತರ ಶಾಶ್ವತ ಪಡಿತರ ಚೀಟಿ ನೀಡಲಾಗುವುದು

105 (438) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ತಾತ್ಕಾಲಿಕವಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯದಲ್ಲಿ ಕಾರ್ಯಗತಗೊಳಿಸುತ್ತಿರುವ ಜಲ ನಿರ್ಮಲ ಯೋಜನೆಗಳೆಷ್ಟು ,

ಆ) ಮುದ್ದೇಬಿಹಾಳ ತಾಲೂಕಿನಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳೇನು ,

ಇ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೋರಿ ಬಂದ ಪ್ರಸ್ತಾವನೆಗಳು ಎಷ್ಟು ,